


ಎಡದಿಂದ ಬಲಕ್ಕೆ:

1. ಆತುರಕ್ಕೆ ಸಿಲುಕಿ ಮಾಡಿದ್ದು, ಭಾರೀ ವೈಪರೀತ್ಯ ಬಿಡಿ (4)
3. ದುಂಡನ್ನ ಪರದೆಯ ಸುತ್ತಳತೆ (3)
4. ಮುಸುಕಿನಲ್ಲಿ ಮರೆಯಾಯಿತು ತಲೆ (3)
6. ಖ್ಯಾತಿಯನ್ನು ಗಳಿಸಲೆಂದು ಪಾರ್ವತಿಯ ಹೆಸರು (4)
7. ಹೊಟ್ಟನ್ನು ಮಾರಿಯಾದರೂ ಗಳಿಸಬೇಕೆಂಬ ಪಟ್ಟು ಬಿಡದವಳು ಈಕೆ (4)
9. ಮಾಯೆಯಲ್ಲೇ ತೇಲುತ್ತ ಅಂತಕನ ಮನೆ ಕಂಡ (4)
12. ರಂಗ ಮಂಟಪದಲ್ಲಿ ತೂರಿ ಬಂದವನಿಗೆ ಜೈಲು (4)
15. ಮಣ್ಣಿನಲ್ಲಿ ಸಿಕ್ಕಿದ್ದು ಈ ವರ್ಣಮಯ ರತ್ನ (4)
17. ಹೆದರದಿರಿ, ಇಲ್ಲಿ ಹೋಗಲು ಅಪ್ಪಣೆ ಚೀಟಿ ಇದೆ (4)
18. ಸರಳನ್ನು ಸುತ್ತಿ ಸುತ್ತಿ ರೂಪಿಸಿದರೆ? (3)
19. ಕೆಂಚನಿಗೆ ಅದೇಕೋ ಬಹಳ ಸಿಗ್ಗು (3)
20. ಸುಟ್ಟಲ್ಲೇ ದಾಳಿ ಎಸಗಲು ಆಗಾಗ ಓಡಾಟ (4)

ಮೇಲಿಂದ ಕೆಳಕ್ಕೆ:

1. ತರಕಾರಿ ನಿಷೇಧಿಸಿದವನಿಗೆ ಆಜ್ಞೆ ಮಾಡುವ ಹಕ್ಕಿದೆ (4)
2. ಕಮ್ಮಿಯೇನಿಲ್ಲ, ಅದು ಸುಂದರವಾಗಿದೆ (4)
3. ರೊಟ್ಟಿಯಂತೆಯೇ, ಪರ ಊರಿನ ಒಂದು ತಿಂಡಿ (3)
5. ಕಲ್ಲೇಶಿಯ ಮನೆ ತುಂಬ ಬರೀ ಕೊಳೆ (3)
7. ಹತ್ತಿ ಇಳಿಯುವಷ್ಟರಲ್ಲೇ ಹೊಸತನವೆಲ್ಲ ಹೋಯಿತು (3)
8. ಮುತ್ತುಗದ ಎಲೆ ಹಿಡಿದು ಬಂದ ಋಷಿ ಪುತ್ರ (3)
10. ಜಾಲಕ್ಕೆ ಬಿದ್ದಾಯಿತು, ಮತ್ತೊಂದು ಬೆಕ್ಕು (3)
11. ಕುಣಿಯುವಂತೆ ಮಾಡಿತ್ತು ವಶೀಕರಣ ಮ್ಯಾಜಿಕ್ಕು (3)
13. ಕಾರಂಜಿಯನ್ನೇ ಸುತ್ತಿ ಸುತ್ತಿ ಮನೋಲ್ಲಾಸ ನೀಡು (3)
14. ಮಳೆ ತರಿಸುವುದೇನಿಲ್ಲ, ವಾಪಸ್ ಮಾಡು (4)
15. ನಾರಿಯ ನೋಟದಲ್ಲೇ ಜಲಕ್ರೀಡೆ (4)
16. ಕಡಿಮೆ ಏನಿಲ್ಲ, ಅದು ಮಣ್ಣಿನ ಪಾತ್ರೆ ಅಷ್ಟೆ (3)

## ಪದಬಂಧ: 4-11-2010ರ ಉತ್ತರಗಳು



ಎಡದಿಂದ ಬಲಕ್ಕೆ:

1. ಪರಾಶರಿ; 3. ಮಾರಣ; 7. ದನಗಾಹಿ; 8. ಸುರಂಗ; 9. ತನು; 12. ಸುತ; 14. ಬೆರಕೆ; 15. ಗಲಿಬಿಲಿ; 17. ತಾರಕ; 18. ತಳಮಳ.

ಮೇಲಿಂದ ಕೆಳಕ್ಕೆ:

1. ಪಣ; 2. ಶಮನ; 4. ರಣಾಂಗಣ; 5. ಅಹಿತ; 6. ಆಸುಪಾಸು; 10. ನುಡಿಕೆಡು; 11. ಸೀಬೆಮರ; 13. ತಗಡು; 16. ಬಿಜ್ಜಳ; 17. ತಾಳ.

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಪದಬಂಧದ ಚಿತ್ರ ತಪ್ಪಾಗಿತ್ತು. ಈ ಸಂಚಿಕೆಯಲ್ಲಿ ಸರಿಯಾದ ಚಿತ್ರ ಮತ್ತು ಉತ್ತರ ಪ್ರಕಟಿಸಲಾಗಿದೆ. ಕಣ್ತಪ್ಪಿನಿಂದ ಆದ ಪ್ರಮಾದಕ್ಕೆ ವಿಷಾದಿಸುತ್ತೇವೆ. – ಸಂ


## ವಿಶ್ವ ವಿಶೇಷ

# ಆಕಾಶ ಗಂಗೆ-ಅದೇನು?

'ಆಕಾಶ ಗಂಗೆ'-ಅದೊಂದು ಗ್ಯಾಲಕ್ಸಿ. ಈ ಗ್ಯಾಲಕ್ಸಿಯ ವೈಶಿಷ್ಟ್ಯಗಳು ಎರಡು. ಮೊದಲಿಗೆ ಅದು ನಮ್ಮದೇ ಗ್ಯಾಲಕ್ಸಿ. ಹಾಗೆಂದರೆ ನಮ್ಮ ಸೌರವ್ಯೂಹ ನೆಲೆಗೊಂಡಿರುವುದು ಈ ಗ್ಯಾಲಕ್ಸಿಯಲ್ಲೇ. ಎರಡನೆಯದಾಗಿ ನಮಗೆ ಬರಿಗಣ್ಣಿಗೇ ಸುಲಭವಾಗಿ ಸ್ಪಷ್ಟವಾಗಿ ಗೋಚರಿಸುವ ಗ್ಯಾಲಕ್ಸಿ ಇದೊಂದೇ. ನಿರಭ್ರವಾದ ಚಂದ್ರರಹಿತ ಇರುಳಿನಾಗಸದಲ್ಲಿ ಉತ್ತರ ದಿಗಂತದಿಂದ ದಕ್ಷಿಣದ ತುದಿವರೆಗೆ ಹರಡಿದ 'ಬೆಳಕಿನ ನದಿ'ಯಂತೆ ಈ ಗ್ಯಾಲಕ್ಸಿ ಗೋಚರಿಸುತ್ತದೆ. ಗಾಗಾಗಿ ಈ ಗ್ಯಾಲಕ್ಸಿಗೆ 'ಆಕಾಶ ಗಂಗೆ' ಎಂಬ ಅಭಿಧಾನ. ಇದೇ ದೃಶ್ಯವೇ ಉತ್ತರದಿಂದ ದಕ್ಷಿಣದವರೆಗೆ 'ಹಾಲು ಎರಚಲ್ಪಟ್ಟಿರುವ ರಸ್ತೆ'ಯೊಂದರ ಕಲ್ಪನೆಯೂ ಮೂಡಿಸುವುದರಿಂದ ಇದೇ ಗ್ಯಾಲಕ್ಸಿಯೇ 'ಹಾಲು ಹಾದಿ' ಅಥವಾ 'ಕ್ಷೀರ ಪಥ' (ಮಿಲ್ಕೀ ವೇ) ಎಂಬ ಹೆಸರುಗಳಿಂದಲೂ ಪ್ರಸಿದ್ಧ. ಸ್ಪಷ್ಟವಾಗಿಯೇ 'ಆಕಾಶ ಗಂಗೆ' ಮತ್ತು 'ಕ್ಷೀರ ಪಥ' ಇವೆರಡೂ ನಮ್ಮ ಗ್ಯಾಲಕ್ಸಿಯ ವಿಶಿಷ್ಟ ನಾಮಗಳು. ಎಂದರೆ ವಿಶ್ವದ ಬೇರೆ ಯಾವ ಗ್ಯಾಲಕ್ಸಿಗೂ ಈ ಹೆಸರುಗಳನ್ನು ಬಳಸುವಂತಿಲ್ಲ.

ವಿಶ್ವದಲ್ಲಿರುವ ಹತ್ತು ಸಾವಿರ ಕೋಟಿ ಗ್ಯಾಲಕ್ಸಿಗಳಲ್ಲಿ ಆಕಾಶಗಂಗೆಯೂ ಒಂದು. ಇದು ಒಂದು 'ಸುರುಳಿ ಗ್ಯಾಲಕ್ಸಿ.' ನಮ್ಮ ಸೂರ್ಯನೂ ಸೇರಿದಂತೆ ಈ ಗ್ಯಾಲಕ್ಸಿಯಲ್ಲಿ ಸುಮಾರು ಹತ್ತು ಸಾವಿರ ಕೋಟಿ ನಕ್ಷತ್ರಗಳಿವೆ. ಇಷ್ಟೂ ನಕ್ಷತ್ರಗಳು ಗ್ಯಾಲಕ್ಸಿಯ ಕೇಂದ್ರದಿಂದ ಚಾಚಿರುವ ಒಂಬತ್ತು 'ಸುರುಳಿ ತೋಳು'ಗಳಲ್ಲಿ ಹರಡಿಕೊಂಡಿವೆ. ಉಳಿದ ಸಕಲ ಗ್ಯಾಲಕ್ಸಿಗಳಲ್ಲೂ ಇರುವಂತೆಯೇ ಇಲ್ಲೂ ಅಪಾರ ಪ್ರಮಾಣದ ಧೂಳು-ಅನಿಲಗಳೂ ಚದರಿ ನಿಂತಿವೆ. ನಮ್ಮ ಸೌರವ್ಯೂಹದಂಥ ಗ್ರಹವ್ಯೂಹಗಳೂ ಹೇರಳ ಸಂಖ್ಯೆಯಲ್ಲಿ ಇರಬಹುದು ಕೂಡ.

ಇಷ್ಟೆಲ್ಲ ನಕ್ಷತ್ರಗಳನ್ನೂ, ನಕ್ಷತ್ರೇತರ ದ್ರವ್ಯ ದಾಸ್ತಾನನ್ನೂ ಧರಿಸಿರುವ ಆಕಾಶ ಗಂಗೆಯದು ಸಹಜವಾಗಿಯೇ ಕಲ್ಪನಾತೀತ ವಿಸ್ತಾರ-ಗಾತ್ರ. ಈ ಗ್ಯಾಲಕ್ಸಿಯ



ಉದ್ದ ಒಂದು ಲಕ್ಷ ಜ್ಯೋತಿರ್ವರ್ಷ ಅಗಲ ಹದಿನಾರು ಸಾವಿರ ಜ್ಯೋತಿರ್ವರ್ಷ ಮತ್ತು ದಪ್ಪ ಸುಮಾರು ಮೂರು ಸಾವಿರ ಜ್ಯೋತಿರ್ವರ್ಷ. (ಒಂದು ಜ್ಯೋತಿರ್ವರ್ಷ ಎಂದರೆ 9460 ಶತಕೋಟಿ ಕಿ.ಮೀ.) ವಿಸ್ಮಯ ಏನೆಂದರೆ ಆಕಾಶ ಗಂಗೆ ಎಂಬ ಈ ಇಡೀ ನಕ್ಷತ್ರ ಮಂಡಲ ಅಂತರಿಕ್ಷದಲ್ಲಿ ಒಂದೇ ಕಡೆ ಸ್ಥಿರವಾಗಿ ನಿಂತಿಲ್ಲ. ಸುತ್ತುತ್ತಿರುವ ಚಕ್ರದಂತೆ ಪ್ರತಿ ಸೆಕೆಂಡ್‌ಗೆ ಇನ್ನೂರ ಐವತ್ತು ಕಿ.ಮೀ. ವೇಗದಲ್ಲಿ ನಿರಂತರ ತಿರುಗುತ್ತಿದೆ.

ಆಕಾಶ ಗಂಗೆಯ ಈಗಿನ ವಯಸ್ಸು ಹನ್ನೆರಡು ಶತಕೋಟಿ ವರ್ಷ. ಎಂಥ ವಯೋಮಾನ! ಆದರೂ ಆಕಾಶ ಗಂಗೆಯದೂ ಚಿರಂಜೀವಿ ಬದುಕೇನಲ್ಲ. ಇನ್ನು ಏಳು ಶತಕೋಟಿ ವರ್ಷಗಳಷ್ಟೇ ಅದರ ಶೇಷ ಆಯುಷ್ಯ!

■ ಎನ್. ವಾಸುದೇವ್